**ಅ.ದಾ. ಸಂ.214/20**
**PW-2**

**<u>ದಿನಾಂಕಃ07.01.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಲ್.ಎ., ವಕೀಲರಿಂದಃ-</u>**

ವಾದಿಯರು ನನಗೆ ಗೊತ್ತು, ನನ್ನ ಸ್ನೇಹಿತ, ಸ್ನೇಹಿತೆಯರು. ವಾದಿಯರು ಯಾರ ವಿರುದ್ಧ ಏನು ಬೇಡಿ ದಾವೆ ಮಾಡಿದ್ದಾರೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ವಾದಿಯ ದಾವಾ ಸ್ವತ್ತನ್ನು ದಿಃ05.05.2011ರಂದು ಖರೀದಿ ಮಾಡಿರುತ್ತಾರೆ ಎಂದು ತಮ್ಮ ಪ್ರಮಾಣ ಪತ್ರದಲ್ಲ ಹೇಳಿದ್ದು ತಾವು ಖರೀದಿ ಪತ್ರ ನೋಡಿದ್ದೀರಾ ಎಂದರೆ ಸಾಕ್ಷಿ ಖಾನೇಶುಮಾರಿ ನಂಬರ್.367/429ರ ಆಸ್ತಿಯನ್ನು 1ನೇ ವಾದಿ ಬೋರಪ್ಪ 2ನೇ ವಾದಿ ತಮ್ಮಯ್ಯರವರಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. 1ನೇ ಪ್ರತಿವಾದಿ ರಾಕೇಶ್ ದಾವಾ ಆಸ್ತಿಯ ಯಾವ ದಿಕ್ಕಿಗೆ ಆಸ್ತಿ ಹೊಂದಿದ್ದಾರೆ ಎಂದರೆ ಸಾಕ್ಷಿ ದಕ್ಷಿಣ ದಿಕ್ಕಿಗೆ ಎನ್ನುತ್ತಾರೆ. ವಾದಿಯರ ವಿರುದ್ಧ ಈ ದಾವೆಯ 1ನೇ ಪ್ರತಿವಾದಿ ರಾಕೇಶ ಅಸಲು ದಾವಾ ನಂಬರ್.285/2019 ಎಂದು ಇದೇ ಚನ್ನಪಟ್ಟಣದ ನ್ಯಾಯಾಲಯದಲ್ಲಿ ದಾವೆ ಮಾಡಿದ್ದು ಸದರಿ ದಾವೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಇದೆ ಎಂದರೆ ಸರಿ. 1ನೇ ಪ್ರತಿವಾದಿ ವಾದಿಯರ ವಿರುದ್ಧ ಏನು ಬೇಡಿ ದಾವೆ ಮಾಡಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಯ ಜಮೀನನ್ನು ವಾದಿಯರು ಒತ್ತುವರಿ ಮಾಡಿ ತಂತಿಬೇಲಿ ನಿರ್ಮಿಸಿ ಕಟ್ಟಡ ಕಟ್ಟಿದ್ದರು ಎಂದು 1ನೇ ಪ್ರತಿವಾದಿಯು ದಾವೆ ಹೂಡಿದ್ದರು ಎಂದರೆ ಸಾಕ್ಷಿ 1ನೇ ಪ್ರತಿವಾದಿಯೇ ವಾದಿಯರ ಆಸ್ತಿ ಒತ್ತುವರಿ ಮಾಡಿರುತ್ತಾರೆ ಎನ್ನುತ್ತಾರೆ. 1ನೇ ಪ್ರತಿವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದರಿಂದ1ನೇ ಪ್ರತಿವಾದಿ ತಾವು ದಾಖಲು ಮಾಡಿದ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪಡೆದಿದ್ದರೂ ಸದರಿ ಆದೇಶವನ್ನು ಉಲ್ಲಂಘಿಸಿ ವಾದಿಯರು ತಂತಿಬೇಲಿ ಮತ್ತು ಕಟ್ಟಡ ನಿರ್ಮಿಸಿದ್ದರು ಎಂದರೆ ಸರಿಯಲ್ಲ. ವಾದಿಯರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಉಲ್ಲಂಘಿಸಿದ ಪರಿಣಾಮ 1ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಅರ್ಜಿಯ ಮೇರೆಗೆ ಸಿವಿಲ್ ಮಿಸ್.12/2019 ಎಂದು ಅರ್ಜಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಸದರಿ 1ನೇ ಪ್ರತಿವಾದಿಯು ಹೂಡಿದ್ದ ದಾವೆಯ ಪರ್ಯಾಯವಾಗಿ ಉದ್ದೇಶಪೂರ್ವಕವಾಗಿ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹೂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯರ ಸ್ವತ್ತಿನಲ್ಲಿ ತಂತಿಬೇಲಿ ನಿರ್ಮಿಸಿದ್ದು 1ನೇ ಪ್ರತಿವಾದಿಯು ಅದನ್ನು ಕಿತ್ತುಹಾಕಿ ಹಾಳುಮಾಡಿದ್ದಾನೆ ಎಂದು ತೋರಿಸಲು ತಾವು ನ್ಯಾಯಾಲಯಕ್ಕೆ ಫೋಟೋ ಹಾುರುಪಡಿಸಿದಿದ್ದರಾ ಎಂದರೆ ಇಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಯು ವಾದಿಯರಿಗೆ ಸೇರಿದ ಆಸ್ತಿಯಲ್ಲಿದ್ದ ತಂತಿಬೇಲಿಯನ್ನು ಕಿತ್ತುಹಾಕಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ವಾದಿಯರು ಪೊಲೀಸ್ ದೂರು ದಾಖಲು ಮಾಡಿದ್ದಾರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ದೂರಿನ ಪ್ರತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಂಚಾಯ್ತಿ ಆದ ಬಗ್ಗೆ ತಮ್ಮ ಪ್ರಮಾಣ ಪತ್ರದಲ್ಲಾಗಲೀ ಅಥವಾ ಬೇರೆ ಯಾವ ಲಿಖಿತ ಬರವಣಿಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜಹರುಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಾದಿಯರೇ 1ನೇ ಪ್ರತಿವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ ಅವರ ವಿರುದ್ಧ ಬೇರೆ ಸುಳ್ಳು ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಈಗಾಗಲೇ

ಹೇಳಿರುವ ಹಾಗೆ ವಾದಿಯರು ನನ್ನ ಸ್ನೇಹಿತರು ಎಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ